ಶ್ರೀ ಎಂ. ವಿ. ವೆಂಕಟಪ್ಪ : ಮಾನ್ಯಅಧ್ಯಕ್ಷರೇ, ಈ ಸಭೆಯ ನಿಯಮಾವಳಿ ಬಗ್ಗೆ ತಾವು ಒಂದು ಸಮಿತಿಯನ್ನು ಮಾಡಿದ್ದೀರಿ. ಅದು ರಿಪೋರ್ಟ್ ಎಲ್ಲಾ ಕೊಟ್ಟಿದೆ. ಅದನ್ನು ನಾವು ಈ ಒಂದು ಸದನದಲ್ಲಿ ಅಡಾಪ್ಟ್ ಮಾಡಿಕೊಂಡರೆ ಮುಂಚೆ ಹೊಸದಾಗಿ ಏನು ಅಸೆಂಬ್ಲಿ ಬರುತ್ತದೆ, ಆ ನಿಯಮಾವಳಿಯನ್ನು ಅನುಸರಿಸುವುದಕ್ಕೆ ಅನುಕೂಲವಾಗುತ್ತದೆ. ಅದರ ಬಗ್ಗೆ ತಾವು ಏನು ಮಾಡಿದ್ದೀರಿ ಎಂದು ನಮಗೆ ಗೊತ್ತಾಗಿಲ್ಲ.

ಅಧ್ಯಕ್ಷರು : 7ನೇ ತಾರೀಖು ತೆಗೆದುಕೊಳ್ಳುತ್ತೇನೆ.

ದ.ಅ॥ ಸಭೆಯ ಮುಂದಿಡಲಾಗುವ ಕಾಗದಪತ್ರಗಳು

1. ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1965ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮ 71(4)ನೇ ಕಲಮಿನ ಮೇರೆಗೆ :

1. 1968ನೇ ಇಸವಿಯ ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ನಿಯಮಗಳ ಸಂಬಂಧದಲ್ಲಿ ದಿನಾಂಕ 3.6.1994 ರಂದು ಹೊರಡಿಸಲಾದ ಎಫ್‌ಡಿ 2 ಪಿಇಎಸ್ 94(1)ನೇ ಕ್ರಮಾಂಕದ ಅಧಿಸೂಚನೆಗೆ ತಿದ್ದುಪಡಿ ಮಾಡುವ ದಿಸೆಯಲ್ಲಿ ದಿನಾಂಕ 5.7.1994ರಂದು ಹೊರಡಿಸಲಾದ ಎಫ್‌ಡಿ 2 ಪಿಇಸ್ 94(1)ನೇ ಕ್ರಮಾಂಕದ ಅಧಿಸೂಚನೆ;
2. 1967ನೇ ಇಸವಿಯ ಕರ್ನಾಟಕ ಅಬಕಾರಿ (ಬಾಟ್ಲಿಂಗ್ ಆಪ್ ಲಿಕ್ಕರ್) ನಿಯಮಗಳ ಸಂಬಂಧದಲ್ಲಿ ದಿನಾಂಕ 3.6.1994ರಂದು ಹೊರಡಿಸಲಾದ ಎಫ್‌ಡಿ 2 ಪಿಇಎಸ್ 94(2)ನೇ ಕ್ರಮಾಂಕದ ಅಧಿಸೂಚನೆಗೆ ತಿದ್ದುಪಡಿ ಮಾಡುವ ದಿಸೆಯಲ್ಲಿ ದಿನಾಂಕ 5.7.1994ರಂದು ಹೊರಡಿಸಲಾದ ಎಫ್‌ಡಿ 2 ಪಿಇಎಸ್ 94(2)ನೇ ಕ್ರಮಾಂಕದ ಅಧಿಸೂಚನೆ ;
3. 1967ನೇ ಇಸವಿಯ ಕರ್ನಾಟಕ ಅಬಕಾರಿ (ಮಾದಕ ದ್ರವ್ಯಗಳ ಸ್ವಾಧೀನ, ಸಾರಿಗೆ, ಆಮದು ಮತ್ತು ರಫ್ತು)ನಿಯಮಗಳ ಸಂಬಂಧದಲ್ಲಿ ದಿನಾಂಕ 2.6.1994ರಂದು ಹೊರಡಿಸಲಾದ ಎಫ್‌ಡಿ 2 ಪಿಇಎಸ್ 94(3)ನೇ ಕ್ರಮಾಂಕದ ಅಧಿಸೂಚನೆಗೆ ತಿದ್ದುಪಡಿ ಮಾಡುವ ದಿಸೆಯಲ್ಲಿ ದಿನಾಂಕ 5.7.1994ರಂದು ಹೊರಡಿಸಲಾದ ಎಫ್‌ಡಿ 2 ಪಿಇಎಸ್ 94(3)ನೇ ಕ್ರಮಾಂಕದ ಅಧಿಸೂಚನೆ;
4. 1969ನೇ ಇಸವಿಯ ಕರ್ನಾಟಕ ಅಬಕಾರಿ (ಮದ್ಯಗಳ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) ನಿಯಮಗಳ ಸಂಬಂಧದಲ್ಲಿ ದಿನಾಂಕ 4.5.1994ರಂದು ಹೊರಡಿಸಲಾದ ಎಫ್.ಡಿ. 4 ಪಿಇಎಸ್ 94ನೇ ಕ್ರಮಾಂಕದ ಅಧಿಸೂಚನೆಯ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 5.7.1994ರಂದು ಹೊರಡಿಸಲಾದ ಎಫ್‌ಡಿ 4, ಪಿಇಎಸ್ 94ನೇ ಕ್ರಮಾಂಕದ ಅಧಿಸೂಚನೆ;

5. 1991ನೇ ಇಸವಿಯ ಕರ್ನಾಟಕ ಅಬಕಾರಿ (ಟ್ಯಾಪಿಂಗ್ ಆಫ್ ಟ್ರೀಸ್) ನಿಯಮಗಳ ಸಂಬಂಧದಲ್ಲಿ ದಿನಾಂಕ 21.5.1994ರಂದು ಹೊರಡಿಸಲಾದ ಎಫ್‌ಡಿ 3 ಪಿಇಎಸ್ 94ನೇ ಕ್ರಮಾಂಕದ ಅಧಿಸೂಚನೆಯ ತಿದ್ದುಪಡಿ ದಿಸೆಯಲ್ಲಿ ದಿನಾಂಕ 10.6.1994ರಂದು ಹೊರಡಿಸಲಾದ ಎಫ್‌ಡಿ 3 ಪಿಇಎಸ್ 94ನೇ ಕ್ರಮಾಂಕದ ಅಧಿಸೂಚನೆ;

6. 1991ನೇ ಇಸವಿಯ ಕರ್ನಾಟಕ ಅಬಕಾರಿ (ಟ್ಯಾಪಿಂಗ್ ಆಫ್ ಟ್ರೀಸ್) ನಿಯಮಗಳ ಸಂಬಂಧದಲ್ಲಿ ದಿನಾಂಕ 23.6.1994ರಂದು ಹೊರಡಿಸಲಾದ ಎಫ್‌ಡಿ 7 ಪಿಇಎಸ್ 94ನೇ ಕ್ರಮಾಂಕದ ಅಧಿಸೂಚನೆಯ ತಿದ್ದುಪಡಿ ದಿಸೆಯಲ್ಲಿ ದಿನಾಂಕ 19.7.1994ರಂದು ಹೊರಡಿಸಲಾದ ಎಫ್‌ಡಿ 7 ಪಿಇಎಸ್ 94ನೇ ಕ್ರಮಾಂಕದ ಅಧಿಸೂಚನೆ ;

7. 1991ನೇ ಇಸವಿಯ ಕರ್ನಾಟಕ ಅಬಕಾರಿ (ಟ್ಯಾಪಿಂಗ್ ಆಫ್ ಟ್ರೀಸ್) ನಿಯಮಗಳ ಸಂಬಂಧದಲ್ಲಿ ದಿನಾಂಕ 28.6.1994ರಂದು ಹೊರಡಿಸಲಾಗಿರುವ ಎಫ್‌ಡಿ 3 ಪಿಇಎಸ್ 94ನೇ ಕ್ರಮಾಂಕದ ಅಧಿಸೂಚನೆಯ ತಿದ್ದುಪಡಿ ದೆಸೆಯಲ್ಲಿ ದಿನಾಂಕ : 28.7.1994ರಂದು ಹೊರಡಿಸಲಾದ ಎಫ್‌ಡಿ 3 ಪಿಇಎಸ್ 94ನೇ ಕ್ರಮಾಂಕದ ಅಧಿಸೂಚನೆ;

1993ನೇ ಇಸವಿಯ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 320ನೇ ಕಲಮಿನ ಮೇರೆಗೆ :

8. ಕರ್ನಾಟಕ ಪಂಚಾಯತ್‌ರಾಜ್ (ಗ್ರಾಮ ಪಂಚಾಯತ್‌ಗಳ ಸಭೆಗಳಲ್ಲಿ ಕಾರ್ಯ ವಿಧಾನ) ನಿಯಮಗಳು, 1994ಕ್ಕೆ ಸಂಬಂಧಿಸಿದಂತೆ ದಿನಾಂಕ 28.3.1994ರಂದು ಹೊರಡಿಸಲಾದ ಗ್ರಾಅಪ 753 ಜಿಪನ 93ನೇ ಕ್ರಮಾಂಕದ ಅಧಿಸೂಚನೆ ;

1993ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ ನಿಯಮ 262(3)ರ ಮೇರೆಗೆ ;

9. 1989-90, 1990-91 ಹಾಗೂ 1991-92ನೇ ಸಾಲುಗಳ ಬಳ್ಳಾರಿ ಜಿಲ್ಲಾ ಪರಿಷತ್ತಿನ ಲೆಕ್ಕಪತ್ರಗಳು ಹಾಗೂ ಲೆಕ್ಕ ಪರಿಶೋಧನಾ ವರದಿಗಳು.

10. 1991-92ನೇ ಸಾಲಿನ ಬಿಜಾಪುರ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಪತ್ರಗಳು.

1993ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ ನಿಯಮ 300 (5) ರ ಮೇರೆಗೆ;

11. 1992-93ನೇ ಸಾಲಿನ ಮೈಸೂರು ಜಿಲ್ಲಾ ಪರಿಷತ್ತಿನ 6ನೇ ವಾರ್ಷಿಕ ಆಡಳಿತ ವರದಿ (ಜ್ಞಾಪನಾ ಪತ್ರದೊಂದಿಗೆ);

12. 1992-93ನೇ ಸಾಲಿನ ಧಾರವಾಡ ಜಿಲ್ಲಾ ಪರಿಷತ್ತಿನ ವಾರ್ಷಿಕ ಆಡಳಿತ ವರದಿ (ಜ್ಞಾಪನಾಪತ್ರದೊಂದಿಗೆ)ಗಳು.

II ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, (ಶ್ರೀ ಧರ್ಮಸಿಂಗ್(ಕಂದಾಯ ಮಂತ್ರಿ)ಯವರ ಪರವಾಗಿ, ಅವರ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕರ್ನಾಟಕ ಭೂ ಕಂದಾಯ ನಿಯಮ 1964ರ ಪ್ರಕರಣ 194(2)ನೇ ಕಲಮಿನ ಮೇರೆಗೆ;

1. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ನಾಲ್ಕು ಗ್ರಾಮಗಳ 1972-73ನೇ ಸಾಲಿನ ಭೂ ಕಂದಾಯ 36, 320-78 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 18.6.1994ರಂದು ಹೊರಡಿಸಲಾದ ಆರ್‌ಡಿ 128 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

2. ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ 15 ಗ್ರಾಮಗಳ 1977-78ನೇ ಸಾಲಿನ ಭೂ ಕಂದಾಯ 23,125-69ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 18.6.1994ರಂದು ಹೊರಡಿಸಲಾದ ಆರ್‌ಡಿ 132 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

3. ಬೆಳಗಾವಿ ಜಿಲ್ಲೆಯ ರಾಯಭಾಗ್ ತಾಲ್ಲೂಕಿನ ಒಂದು ಗ್ರಾಮದ 1979-80ನೇ ಸಾಲಿನ ಭೂ ಕಂದಾಯ 11,217-97ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 18.6.1994ರಂದು ಹೊರಡಿಸಲಾದ ಆರ್‌ಡಿ 129 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

4. ವಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ 10 ಗ್ರಾಮಗಳ 1966-67ನೇ ಸಾಲಿನ ಭೂ ಕಂದಾಯ 12,748-82 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 18.6.1994ರಂದು ಹೊರಡಿಸಲಾದ ಆರ್‌ಡಿ 52 ಟಿಆರ್‌ಎಂ 92ನೇ ಕ್ರಮಾಂಕದ ಅಧಿಸೂಚನೆ;

5. ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ 6 ಗ್ರಾಮಗಳ 1989-90ನೇ ಸಾಲಿನ ಭೂ ಕಂದಾಯ 5,953-49 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 18.6.1994ರಂದು ಹೊರಡಿಸಲಾದ ಆರ್‌ಡಿ 127 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

6. ಬೆಳಗಾವಿ ಜಿಲ್ಲೆಯ ರಾಯಬಾಗ್ ತಾಲ್ಲೂಕಿನ ಎರಡು ಗ್ರಾಮಗಳ 1980-81 ನೇ ಸಾಲಿನ ಭೂ ಕಂದಾಯ 11,306-23 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 18.6.1994ರಂದು ಹೊರಡಿಸಲಾದ ಆರ್‌ಡಿ 133 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

7. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 19 ಗ್ರಾಮಗಳ 1985-86ನೇ ಸಾಲಿನ ಭೂ ಕಂದಾಯ 40,459-92ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21.6.1994ರಂದು ಹೊರಡಿಸಲಾದ ಆರ್‌ಡಿ 125 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

8. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ 31 ಗ್ರಾಮಗಳ 1977-78ನೇ ಸಾಲಿನ ಭೂ ಕಂದಾಯ 1,30,630-65ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21.6.1994ರಂದು ಹೊರಡಿಸಲಾದ ಆರ್‌ಡಿ 131 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

9. ಬೆಳಗಾಂ ಜಿಲ್ಲೆಯ ಖಾನಾಪುರ ತಾಲ್ಲೂಕಿನ24 ಗ್ರಾಮಗಳ 1997-98 ಸಾಲಿನ ಕಂದಾಯ 24,567-66 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21.6.1994ರಂದು ಹೊರಡಿಸಲಾದ ಆರ್‌ಡಿ 130 ಟಾರ್‌ಎಂ 92ನೇ ಕ್ರಮಾಂಕದ ಅಧಿಸೂಚನೆ;

10. ಬೆಳಗಾವಿ ಜಿಲ್ಲೆಯ ರಾಯಭಾಗ್‌ತಾಲ್ಲೂಕಿನ 23 ಗ್ರಾಮಗಳ 1979-80ನೇ ಸಾಲಿನ ಭೂ ಕಂದಾಯ 41,900-36 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21.6.1994 ರಂದು ಹೊರಡಿಸಲಾದ ಆರ್‌ಡಿ 124 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

11. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ 28 ಗ್ರಾಮಗಳ 1977-78ನೇ ಸಾಲಿನ ಭೂ ಕಂದಾಯ 1,09,451-93 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21.6.1994 ರಂದು ಹೊರಡಿಸಲಾದ ಆರ್‌ಡಿ 126 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

12. ಬೆಳಗಾವಿ ಜಿಲ್ಲೆಯ ರಾಯಭಾಗ್ ತಾಲ್ಲೂಕಿನ 30 ಗ್ರಾಮಗಳ 1980-81 ನೇ ಸಾಲಿನ ಭೂ ಕಂದಾಯ 63,310-26 ರೂ.ಗಳನ್ನು ಮನ್ನಾ ಮಾಡುವ ಸಂಬಂಂಧದಲ್ಲಿ ದಿನಾಂಕ 21.6.1994 ರಂದು ಹೊರಡಿಸಲಾದ ಆರ್‌ಡಿ 130 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

13. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲಕಿನ 23 ಗ್ರಾಮಗಳ 1985-86ನೇ ಸಾಲಿನ ಭೂ ಕಂದಾಯ 22, 058-79 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 21.6.1994ರಂದು ಹೊರಡಿಸಲಾದ ಆರ್‌ಡಿ 134 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

14. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ 29 ಗ್ರಾಮಗಳ 1975-76ನೇ ಸಾಲಿನ ಭೂ ಕಂದಾಯ 1,52,525-57 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 11.7.1994ರಂದು ಹೊರಡಿಸಲಾದ ಆರ್‌ಡಿ 149 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ;

15. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಎಂಟು ಗ್ರಾಮಗಳ 1981-82ನೇ ಸಾಲಿನ ಭೂ ಕಂದಾಯ 25,122-32 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 11.7.1994ರಂದು ಹೊರಡಿಸಲಾದ ಆರ್‌ಡಿ 156 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

16. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಐದು ಗ್ರಾಮಗಳ 1975-76ನೇ ಸಾಲಿನ ಭೂ ಕಂದಾಯ 7,769-27 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 11.7.1994ರಂದು ಹೊರಡಿಸಲಾದ ಆರ್‌ಡಿ 155 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

17. ವಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ 39 ಗ್ರಾಮಗಳ 1990-91ನೇ ಸಾಲಿನ ಭೂಕಂದಾಯ 36,701-28 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 11.7.1994ರಂದು ಹೊರಡಿಸಲಾದ ಆರ್‌ಡಿ 153 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

18. ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ 25 ಗ್ರಾಮಗಳ 1983-84ನೇ ಸಾಲಿನ ಭೂ ಕಂದಾಯ 16,572-00 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 11.7.1994ರಂದು ಹೊರಡಿಸಲಾದ ಆರ್‌ಡಿ 151 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

19. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ 28 ಗ್ರಾಮಗಳ 1983-84ನೇ ಸಾಲಿನ ಭೂ ಕಂದಾಯ 1,55,982-80 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 11.7.1994ರಂದು ಹೊರಡಿಸಲಾದ ಆರ್‌ಡಿ 148 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

20. ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ 13 ಗ್ರಾಮಗಳ 1982-83ನೇ ಸಾಲಿನ ಭೂ ಕಂದಾಯ 20,769-52 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 11.7.1994ರಂದು ಹೊರಡಿಸಲಾದ ಆರ್‌ಡಿ 150 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

21. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ 40 ಗ್ರಾಮಗಳ 1983-84ನೇ ಸಾಲಿನ ಭೂ ಕಂದಾಯ 92,434-46 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 12.7.1994ರಂದು ಹೊರಡಿಸಲಾದ ಆರ್‌ಡಿ 147 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

22. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 28 ಗ್ರಾಮಗಳ 1983-84ನೇ ಸಾಲಿನ ಭೂ ಕಂದಾಯ 39,828-68 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 12.7.1994ರಂದು ಹೊರಡಿಸಲಾದ ಆರ್‌ಡಿ 152 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

23. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 24 ಗ್ರಾಮಗಳ 1989-90ನೇ ಸಾಲಿನ ಭೂ ಕಂದಾಯ 41,306-51 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 12.7.1994ರಂದು ಹೊರಡಿಸಲಾದ ಆರ್‌ಡಿ 154 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ ;

24. ಕೋಲಾರ ಜಿಲ್ಲೆಯ ಕೋಲಾರ ತಾಲ್ಲೂಕಿನ 362 ಗ್ರಾಮಗಳ 1989-90ನೇ ಸಾಲಿನ ಭೂ ಕಂದಾಯ 1,72,889-51 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 23.7.1994ರಂದು ಹೊರಡಿಸಲಾದ ಆರ್‌ಡಿ 96 ಟಿಆರ್‌ಎಂ 91ನೇ ಕ್ರಮಾಂಕದ ಅಧಿಸೂಚನೆ ;

25. ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನ 48 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 2,61,651-20 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 26.7.1994ರಂದು ಹೊರಡಿಸಲಾದ ಆರ್‌ಡಿ 9 ಟಿಆರ್‌ಎಂ 92ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುವುದು.

III. **ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿ) ಅವರ ಪರವಾಗಿ ಅದರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.**

1957ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮದ 16(2)ನೇ ಕಲಮಿನ ಮೇರೆಗೆ ;

1. ದಿನಾಂಕ 3.6.1989ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಟಿಡಿ 99 ಟಿಎಂಟಿ 88ನ್ನು ರದ್ದುಗೊಳಿಸುವುದರ ಸಂಬಂಧದಲ್ಲಿ ದಿನಾಂಕ 1.4.1994 ರಿಂದ ಜಾರಿಗೆ ಬರುವಂತೆ ದಿನಾಂಕ 31.3.1994 ರಂದು ಹೊರಡಿಸಲಾದ ಹೆಚ್‌ಟಿಡಿ 42 ಟಿಂಟಿ 94(1)ನೇ ಕ್ರಮಾಂಕದ ಅಧಿಸೂಚನೆ ;

2. ಸಂಯುಕ್ತ ಮೊಬಲಗಿನ ರೂಪದಲ್ಲಿ ಪಾವತಿಸುವ ತೆರಿಗೆಯ ಸಂಬಂಧದಲ್ಲಿ ದಿನಾಂಕ 31.3.1994ರಂದು ಹೊರಡಿಸಲಾದ ಹೆಚ್‌ಟಿಡಿ 42 ಟಿಎಂಟಿ 94(2)ನೇ ಕ್ರಮಾಂಕದ ಅಧಿಸೂಚನೆ ;

3. ದಿನಾಂಕ 31.3.1994ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಹೆಚ್‌ಟಿಡಿ 42 ಟಿಎಂಟಿ 94(2)ರ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 14.7.1994 ರಂದು ಹೊರಡಿಸಲಾದ ಹೆಚ್‌ಟಿಡಿ 42 ಟಿಎಂಟಿ 94ನೇ ಕ್ರಮಾಂಕದ ಅಧಿಸೂಚನೆ ;

4. 1989ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ನಿಯಮಾವಳಿಗಳ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 10.10.1991 ರಂದು ಹೊರಡಿಸಲಾದ ಎಫ್‌ಟಿಡಿ 7 ಟಿಎಂಆರ್ 90ನೇ ಕ್ರಮಾಂಕದ ಅಧಿಸೂಚನೆ ;

5. ದಿನಾಂಕ 10.10.1991ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಪ್‌ಟಿಡಿ 7 ಟಿಎಂಆರ್ 90ರ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 1.4.1992ರಂದು ಹೊರಡಿಸಲಾದ ಎಫ್‌ಟಿಡಿ 7 ಟಿಎಂಆರ್ 90ನೇ ಕ್ರಮಾಂಕದ ತಿದ್ದೋಲೆ ;

IV **ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋ ಸಚಿವರು) : ಮಾನ್ಯ ಅಧ್ಯಕ್ಷರೇ,**

ಶ್ರೀ. ಚೌಡರೆಡ್ಡಿ (ಗೃಹ ಮಂತ್ರಿ) ಅವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1964ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಕಾಯ್ದೆ 22ರ ಕಲಮಿನ ಮೇರೆಗೆ;

ದಿನಾಂಕ 12.7.1994ರಿಂದ 7.8.1994ರವರೆಗೆ ರಾಯಚೂರು ಜಿಲ್ಲೆಯಲ್ಲಿ ಮಕ್ಕಳ ಚಲನಚಿತ್ರವನ್ನು ಪ್ರದರ್ಶಿಸುವ ಸಂಬಂಧದಲ್ಲಿ ದಿನಾಂಕ 2.8.1994ರಂದು ಹೊರಡಿಸಲಾದ ಹೆಚ್‌ಡಿ 110 ಸಿಎನ್‌ಎ 94ನೇ ಕ್ರಮಾಂಕದ ಅಧಿಸೂಚನೆ.

IV **ಶ್ರೀ ಹೆಚ್. ಎಂ. ರೇವಣ್ಣ (ಕೃಷಿ ಮಂತ್ರಿ) : ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.**

1963ರ ಕೃಷಿ ವಿಶ್ವವಿದ್ಯಾನಿಲಯಗಳ ಅಧಿನಿಯಮದ ನಿಯಮ 38(3)ರ ಮೇರೆಗೆ ;

1992-93ನೇ ಸಾಲಿನ ಧಾರವಾಡದ ಕೃಷಿ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ.

VI **ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೇ, ಶ್ರೀ. ಡಿ.ಎ. ಚಿನ್ನಪ್ಪ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳ ಪರವಾಗಿ ಅವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.**

1957ನೇ ಇಸವಿಯ ಗಣಿ ಮತ್ತು ಖನಿಜ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮದ 28(3)ನೇ ಕಲಮಿನ ಮೇರೆಗೆ ;

1. 1994ನೇ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ (ಕೆಎಂಎಂಸಿಆರ್ 1994)ಗಳಿಗೆ ಸಂಬಂಧಿಸಿದಂತೆ ದಿನಾಂಕ 28.5.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ ;

2. 1994ನೇ ಇಸವಿಯ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳ 13(1)ನೇ ಮತ್ತು 45ನೇ ನಿಯಮದ ಮೇರೆಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರಿಂದ ಚಲಾಯಿಸುವ ಅಧಿಕಾರಗಳ ಸಂಬಂಧದಲ್ಲಿ ದಿನಾಂಕ 4.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ;

3. 1994ನೇ ಇಸವಿಯ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 2(ಎ)ನೇ ನಿಯಮದಡಿ ಉಪ ಖನಿಜಗಳನ್ನು ನಿರ್ದಿಷ್ಟಗೊಳಿಸುವ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ-1 ;

4. 1994ನೇ ಇಸವಿಯ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 2(ಜಿ)ನೇ ನಿಯಮದಡಿ ಕಟ್ಟಡಗಳಿಗೆ ಉಪಯೋಗಿಸುವ ಸಾಮಾನ್ಯ ಕಲ್ಲುಗಳ ನಿರ್ದಿಷ್ಟಪಡಿಸುವ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ-2;

5. 1994ನೇ ಇಸವಿಯ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 4ನೇ ನಿಯಮದಡಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿನ ಪ್ರಾಧಿಕಾರ ಹಾಗೂ ಅಧಿಕಾರಗಳನ್ನು ನಿರ್ದಿಷ್ಟಗೊಳಿಸುವಿಕೆಯ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ-3;

6. 1994ನೇ ಇಸವಿಯ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 5ನೇ ನಿಯಮದಡಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರನ್ನು ನಿಯಂತ್ರಣ ಪ್ರಾಧಿಕಾರಿಯನ್ನಾಗಿ ನೇಮಿಸುವುದರ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ-4;

7. 1994ನೇ ಇಸವಿಯ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 40ನೇ ನಿಯಮದಡಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಅಧಿಕಾರಿಗಳಿಗೆ ಅಧಿಕಾರವನ್ನು ವರ್ಗಾವಣೆ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ-5;

8. 1994ನೇ ಇಸವಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 8(3)ನೇ ನಿಯಮದಡಿ ಸಾರ್ವಜನಿಕರ ಧಾರ್ಮಿಕ ಚಟುವಟಿಕೆಗಳ ಆಚರಣೆಗಾಗಿ ; (1)

ಬೆಂಗಳೂರು ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಮಾರನಾಯಕನಹಳ್ಳಿ ಗ್ರಾಮದ ಸರ್ವೆ ನಂ. 26ರಲ್ಲಿರುವ ಶ್ರೀರಾಮ ದೇವಾಲಯದ ; (2) ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಳ ತಾಲ್ಲೂಕು ಶಿವಗಂಗೆ ಬೆಟ್ಟದಲ್ಲಿರುವ ಶ್ರೀ ಗಂಗಾಧರೇಶ್ವರ ದೇವಸ್ಥಾನದ; (3) ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳ ಬೆಟ್ಟದ ಮೇಲಿರುವ ಶ್ರೀ ಗೊಮ್ಮಟೇಶ್ವರ ವಿಗ್ರಹದ ಸುತ್ತಮುತ್ತಲ 2 ಕಿ.ಮೀ.ಗಳನ್ನು ಹಾಗೂ ವನ್ಯಜೀವಿಗಳನ್ನು ರಕ್ಷಿಸಲು ಆನೇಕಲ್ ತಾಲ್ಲೂಕು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಸರಹದ್ದಿನ ಸುತ್ತಮುತ್ತಲ ಒಂದು ಕಿ.ಮೀ.ನ್ನು ಕಾದಿರಿಸುವ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ-6;

9. 1994ನೇ ಇಸವಿಯ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 43(1)ನೇ ನಿಯಮದ 1994ನೇ ಕರ್ನಾಟಕ ಅರಣ್ಯ ನಿಯಮಾವಳಿಗಳಡಿ ಸ್ಥಾಪಿಸಿದ ಚಕ್‌ಪೋಸ್ಟ್ ಮತ್ತು ಬ್ಯಾರಿಯರ್‌ಗಳನ್ನು ಪ್ರಕಟಿಸುವುದರ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ-7;

10. 1994ನೇ ಇಸವಿ ಕರ್ನಾಟಕ ಉಪ ಖನಿಜಗಳ ರಿಯಾಯಿತಿ ನಿಯಮಾವಳಿಗಳ 43(1)ನೇ ನಿಯಮದ ರೀತ್ಯಾ ದಕ್ಷಿಣ ಕನ್ನಡ ಜಿಲ್ಲೆಯ ಕನ್ನೂರು, ಮೂಕ, ವಾಮುಜೂರ್,ಬಜಪೆ, ಮುಡಿಪು, ಉತ್ತರ ಕನ್ನಡ ಜಿಲ್ಲೆಯ ಅನಮೋಡ್, ಮಜಾಲಿ, ಬೆಂಗಳೂರು ಜಿಲ್ಲೆಯ ಹಾರೋಹಳ್ಳಿ, ಗುಲ್ಬರ್ಗಾ ಜಿಲ್ಲೆಯ ಅಲಂಡ್ ರೋಡ್‌ಗಳಲ್ಲಿರುವ ಚಕ್‌ಪೋಸ್ಟ್ ಹಾಗೂ ಬ್ಯಾರಿಯರ್‌ಗಳನ್ನಾಗಿ ನಿರ್ದೇಶಿಸಿರುವುದರ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ-8;

11. 1994ನೇ ಇಸವಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 43(1)ನೇ ನಿಯಮದ ಮೇರೆಗೆ ಗಣಿ ಮತ್ತು ಭೂವಿಜ್ಞಾನ, ಅರಣ್ಯ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆಗಳ ಅಧಿಕಾರಿಗಳಿಗೆ ಅಧಿಕಾರ ನೀಡುವುದರ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ-9;

12. 1994ನೇ ಇಸವಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 46(1)ನೇ ನಿಯಮದಡಿ ಗಣಿ ಮತ್ತು ಭೂ ವಿಜ್ಞಾನದ ಇಲಾಖೆಯ ನಿರ್ದೇಶಕರು, ಜಂಟಿ ನಿರ್ದೇಶಕರು, ಹಿರಿಯ ಭೂ ವಿಜ್ಞಾನಿಗಳು ಹಾಗೂ ಸಹಾಯಕ ಭೂ ವಿಜ್ಞಾನಿಗಳಿಗೆ ಅಧಿಕಾರ ನೀಡುವುದರ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ-10;

13. 1994ನೇ ಇಸವಿಯ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 47 (1)ನೇ ಹಾಗೂ 52ನೇ ನಿಯಮದಡಿ ಗಣಿ ಮತ್ತು ಭೂ ವಿಜ್ಞಾನದ ಇಲಾಖೆಯ ನಿರ್ದೇಶಕರು, ಅಪರ ನಿರ್ದೇಶಕರು, ಜಂಟಿ ನಿರ್ದೇಶಕರು, ಉಪ ನಿರ್ದೇಶಕರ, ಹಿರಿಯ ಭೂವಿಜ್ಞಾನಿಗಳು ಹಾಗೂ ಭೂವಿಜ್ಞಾನಿಗಳಿಗೆ ಅಧಿಕಾರ ನೀಡುವ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92ನೇ ಕ್ರಮಾಂಕದ ಅಧಿಸೂಚನೆ-11;

14. 1994ನೇ ಇಸವಿಯ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 10ನೇ ನಿಯಮದಡಿ ಮೈಸೂರು ಮಿನರಲ್ಸ್ ಲಿಮಿಟೆಡ್‌ನಿಂದ ಪಾವತಿಸಬೇಕಾದ ಭದ್ರತಾ ಠೇವಣಿಯ ಮೊಬಲಗಿನಲ್ಲಿ ವಿನಾಯಿತಿ ನೀಡುವುದರ ಸಂಬಂಧದಲ್ಲಿ ದಿನಾಂಕ 2.7. 1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92(1)ನೇ ಕ್ರಮಾಂಕದ ಆದೇಶ;

15. 1994ನೇ ಇಸವಿಯ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳ 36(4)ನೇ ನಿಯಮದಡಿ ಮೈಸೂರು ಮಿನರಲ್ಸ್ ಲಿಮಿಟೆಡ್‌ನಿಂದ ಪಾವತಿಸಬೇಕಾದ ನಿಷ್ಕ್ರಿಯಬಾಡಿಗೆ ದರವನ್ನು ರಿಯಾಯಿತಿಗೊಳಿಸುವುದರ ಸಂಬಂಧದಲ್ಲಿ ದಿನಾಂಕ 2.7.1994ರಂದು ಹೊರಡಿಸಲಾದ ಸಿಐ 418 ಎಂಆರ್‌ಸಿ 92(2)ನೇ ಕ್ರಮಾಂಕದ ಆದೇಶಗಳು.

VII **ಶ್ರೀ ಪಿ.ಆರ್.ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಶ್ರೀ ಪೆರಿಕಾಲ್ ಮಲ್ಲಪ್ಪ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಮಂತ್ರಿ)ಯವರ ಪರವಾಗಿ, ಅವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.**

1964ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆಯ 25ನೇ ಕಲಮಿನ ಮೇರೆಗೆ ;

1990-91ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವಾರ್ಷಿಕ ಲೆಕ್ಕ ಮತ್ತು ಲೆಕ್ಕ ಪರೀಕ್ಷಕರ ವರದಿ.

VIII. **ಶ್ರೀ ವಸಂತ್ ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.**

1956ನೇ ಸಾಲಿನ ಕಂಪನಿಗಳ ಕಾಯ್ದೆಯ 619(ಎ) ಕಲಮಿನ ಮೇರೆಗೆ ;

ದಿನಾಂಕ 31.2.1992ರಂದು ಅಂತ್ಯಗೊಳ್ಳುವ ಕರ್ನಾಟಕ ಮಾನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 22ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು.

IX ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೇ, ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯಮಂತ್ರಿ)ಯವರ ಪರವಾಗಿ, ಅವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1956ನೇ ಸಾಲಿನ ಕಂಪನಿಗಳ ಕಾಯ್ದೆಯ 619(ಎ) ಕಲಮಿನ ಮೇರೆಗೆ ;

1987-88ನೇ ಸಾಲಿನ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 18ನೇ ವಾರ್ಷಿಕ ವರದಿ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅರ್ಜಿಗಳನ್ನು ಒಪ್ಪಿಸುವುದು.

Sri. K.C. Modgekar Desai :I present the following Petitions

(1) Regarding formation of roads to the lands belonging to the villages of Ventamuri. Belgaum taluk

(2) Regarding repairs to Gaddikarvi-koppa road in Bailahongal taluk

Sri. Sadath Ali Khan : I present the petition regarding illegal tresspass into the property belonging to Bijapur Mahadavai Muslim Jamat Vakf.

Mr. Speaker : Petitions are presented.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಕಛೇರಿಗೆ ಈ ರೂಲ್ಸ್ ಆಫ್ ಪ್ರೊಸೀಜರ್ 311ರ ಪ್ರಕಾರ ಮಾನ್ಯ ಗೃಹಸಚಿವರ ವಿರುದ್ಧ ಒಂದು ನೋಟೀಸನ್ನು ಕಳುಹಿಸಿದ್ದೆ. ಮತ್ತು ಆ ನೋಟೀಸಿನ ನಕಲು ಮಾನ್ಯ ಗೃಹಸಚಿವರಿಗೂ ಸಹ ಕಳುಹಿಸಿದ್ದೇನೆ. ಇದು 29ನೇ ಆಗಸ್ಟ್ 94ರಂದು.

ಅಧ್ಯಕ್ಷರು : ತಾವು ಕಳುಹಿಸಿದ್ದೀರಿ. ಇದನ್ನು 7ನೇ ತಾರೀಖಿಗೆ ತೆಗೆದುಕೊಳ್ಳೋಣ.